ಇ) 2004–05ನೇ ಸಾಲಿನಲ್ಲಿ 492 ಸಣ್ಣ ಕೈಗಾರಿಕಾ ಘಟಕಗಳಿಗೆ ಹಿಂದಿನ ಅವಧಿಯಲ್ಲಿ ಮಂಜೂರಾಗಿರುವ ಸಹಾಯಧನದಲ್ಲಿ ಶೇ.50ರಂತೆ ರೂ.5.59 ಕೋಟಿ ಸಹಾಯಧನ ಬಿಡುಗಡೆ ಮಾಡಲಾಗಿದೆ.

ಈ) 1. 2001–06ರ ಕೈಗಾರಿಕಾ ನೀತಿಯನ್ನು ಬಿ ಮತ್ತು ಸಿ ವಲಯವೆಂದು ಗುರುತಿಸಿದ್ದು ಇದರಂತೆ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಯಾವುದೇ ಸಹಾಯಧನ ಲಭ್ಯವಿರುವುದಿಲ್ಲ. ಆದರೆ ಅತಿ ಸಣ್ಣ ಕೈಗಾರಿಕೆಗಳಿಗೆ ಸ್ಥಿರಾಸ್ತಿ ಮೌಲ್ಯದ ಶೇ.10 ಮತ್ತು 20ರಂತೆ ಗರಿಷ್ಟ ರೂ.5.00 ಲಕ್ಷದಿಂದ ರೂ.10.00 ಲಕ್ಷದವರೆಗೆ ಸಹಾಯಧನ ಲಭ್ಯವಿರುತ್ತದೆ.

2. ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಬಿ ಮತ್ತು ಸಿ ವಲಯದಲ್ಲಿ 5 ಮತ್ತು 6 ವರ್ಷದವರೆಗೆ ಪ್ರವೇಶ ತೆರಿಗೆ ವಿನಾಯಿತಿ ಲಭ್ಯವಿರುತ್ತದೆ.

3. ಜಿಲ್ಲಾ ಕೈಗಾರಿಕಾ ಕೇಂದ್ರಗಳಿಂದ ಗರಿಷ್ಟ 15 ದಿನಗಳವರೆಗೆ ಉದ್ಯಮಶೀಲತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

4. ಉದ್ಯಮಶೀಲತೆ ತರಬೇತಿ ಪಡೆದವರಿಗೆ ಕೈಗಾರಿಕೆ ಸ್ಥಾಪಿಸಲು ಪೂರ್ಣವಾದ ಸಹಕಾರ ಮತ್ತು ಸರ್ಕಾರದಿಂದ ಬರುವ ಸವಲತ್ತುಗಳನ್ನು ಮಂಜೂರು ಮಾಡಲಾಗುವುದು.

5. ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಉತ್ಪನ್ನ ರಫ್ತು ಮಾರಾಟದ ಬಗ್ಗೆ ತರಬೇತಿ ನೀಡಲಾಗುವುದು.

6. ಕೈಗಾರಿಕೋದ್ಯಮಿಗಳ ಉತ್ಪನ್ನಗಳನ್ನು ರಾಷ್ಟ್ರೀಯ ವಸ್ತು ಪ್ರದರ್ಶನ ಮತ್ತು ಮೇಳಗಳಲ್ಲಿ ಭಾಗವಹಿಸುವುದಕ್ಕೆ ಉಚಿತ ಪ್ರದರ್ಶನ ವ್ಯವಸ್ಥೆ ಮಾಡಲಾಗುವುದು.

7. ಕೈಗಾರಿಕೋದ್ಯಮಿಗಳ ಅಂತರಾಷ್ಟ್ರೀಯ ವಸ್ತು ಪ್ರದರ್ಶನ ಮತ್ತು ಮೇಳಗಳಲ್ಲಿ ಭಾಗವಹಿಸಲು ಶೇ. 50ರಂತೆ ಗರಿಷ್ಟ ರೂ.50,000/– ದವರೆಗೆ ಪ್ರಯಾಣ ವೆಚ್ಚವನ್ನು ಮಂಜೂರು ಮಾಡಲಾಗುವುದು

8. ಅಂತರಾಷ್ಟ್ರೀಯ ವಾಣಿಜ್ಯ ಒಕ್ಕೂಟಗಳಲ್ಲಿ ಭಾಗವಹಿಸಲು ಗರಿಷ್ಟ 20 ಉದ್ಯಮಿಗಳಿಗೆ ಶೇ.50ರಂತೆ ಪ್ರತಿಯೊಬ್ಬರಿಗೆ ಗರಿಷ್ಟ ರೂ. 50,000/– ಪ್ರಯಾಣ ಭತ್ಯೆ ನೀಡಲಾಗುವುದು.

2669 (3414) ಶ್ರೀ ಕ್ಯಾತ್‌ಸಂದ್ರ ಎನ್. ರಾಜಣ್ಣ :– ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಸಹಕಾರಿ ಹಾಗೂ ಖಾಸಗಿ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಎಷ್ಟು ಸಕ್ಕರೆ ಕಾರ್ಖಾನೆಗಳು ಕೋ-ಜನರೇಷನ್ ಅನ್ನು ಹೊಂದಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿವೆ;

ಇ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಇಥನಾಲ್ ಉತ್ಪಾದನೆ ಮಾಡುತ್ತಿವೆ; ಈ ಇಥನಾಲ್ ಅನ್ನು ಇಂಧನದಲ್ಲಿ ಬಳಸಲಾಗುತ್ತಿದೆಯೇ?

ಶ್ರೀ ಅಮರೇಗೌಡ ಎಲ್. ಪಾಟೀಲ್ ಬಯ್ಯಾಪುರ (ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ 21 ಸಹಕಾರಿ ವಲಯದಲ್ಲಿ, ಖಾಸಗಿ ವಲಯದಲ್ಲಿ 22 ಸಕ್ಕರೆ ಕಾರ್ಖಾನೆಗಳಿವೆ.

ಆ) ಒಟ್ಟು 14 ಸಕ್ಕರೆ ಕಾರ್ಖಾನೆಗಳು ಸಹ ವಿದ್ಯುತ್ ಘಟಕವನ್ನು ಹೊಂದಿ 266.20 ಮೆ.ವ್ಯಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿವೆ.

ಇ) 4 ಸಕ್ಕರೆ ಕಾರ್ಖಾನೆಗಳು ಇಥನಾಲ್ ಘಟಕಗಳನ್ನು ಅಳವಡಿಸಿಕೊಂಡಿವೆ.

ಕೇಂದ್ರ ಸರ್ಕಾರ ತನ್ನ ಅಧಿಸೂಚನೆ ದಿನಾಂಕ 27-10-2004ರಲ್ಲಿ ಪೆಟ್ರೋಲ್‌ನೊಂದಿಗೆ ಶೇ.5ರಷ್ಟು ಇಥನಾಲ್ ಬೆರೆಸುವುದನ್ನು ಕಡ್ಡಾಯ ಮಾಡಿರುವುದಿಲ್ಲ.

2670 (3415) ಶ್ರೀ ಕ್ಯಾತ್‌ಸಂದ್ರ ಎನ್.ರಾಜಣ್ಣ (ಬೆಳ್ಳಾವಿ) :- ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು 2004-05ನೇ ಸಾಲಿನಲ್ಲಿ ವಕ್ಫ್ ಬಿಡುಗಡೆಗೊಳಿಸುವ ಅನುದಾನ ಎಷ್ಟು;

ಆ) ಯಾವ ಯಾವ ಕಾರ್ಯಕ್ರಮಗಳಿಗೆ, ಉದ್ದೇಶಗಳಿಗೆ ಎಷ್ಟೆಷ್ಟು ಬಿಡುಗಡೆಯಾಗಿದೆ;

ಇ) ಬೆಳ್ಳಾವಿ ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಯಾವ ಯಾವ ಕಾರ್ಯಕ್ರಮಗಳಿಗೆ ಎಷ್ಟೆಷ್ಟು ಬಿಡುಗಡೆಯಾಗಿದೆ. (ವಿವರ ನೀಡುವುದು);

ಈ) ಈ ಕ್ಷೇತ್ರಕ್ಕೆ ಇನ್ನು ಹೆಚ್ಚಿನ ಅನುದಾನದ ಬಿಡುಗಡೆಗೆ ಬೇಡಿಕೆ ಇದೆಯೇ;

ಉ) ಹಾಗಿದ್ದಲ್ಲಿ, ಈ ಬೇಡಿಕೆಯನ್ನು ಎಷ್ಟು ಸಮಯದಲ್ಲಿ ಈಡೇರಿಸಲಾಗುವುದು?

ಶ್ರೀ ಮೆರಾಜುದ್ದೀನ್ ಎನ್. ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ, ಆ) ಸರ್ಕಾರ 2004-05ನೇ ಸಾಲಿನಲ್ಲಿ ವಕ್ಫ್ ಇಲಾಖೆಗೆ ಬಿಡುಗಡೆಗೊಳಿಸಿದ ಒಟ್ಟು ಅನುದಾನ ರೂಪಾಯಿ 1166.90 ಲಕ್ಷಗಳು.